ಹಿಂದೂ ಧರ್ಮನಿಷ್ಠರಾದ ಗಾಂಧಿ ತಮ್ಮ ಹೋರಾಟಕ್ಕೆ ಧರ್ಮವನ್ನು ಬಳಸಲಿಲ್ಲ. ತಮ್ಮ ಧಾರ್ಮಿಕ ನಂಬಿಕೆಗಳನ್ನು ನಡೆ ನುಡಿಯ ಭಾಗವಾಗಿಸಿಕೊಂಡು, ಖಾಸಗಿಯಾಗಿ ಸಾಕ್ಷಾತ್ಕರಿಸಿಕೊಂಡು ಬದುಕಿದರೆ ಹೊರತು ಹಿಂದೂಧರ್ಮದ ಪ್ರಚಾರಕ್ಕೆ ತೊಡಗಲಿಲ್ಲ. ಹಿಂದೂ ಶ್ರೇಷ್ಠತೆಯನ್ನು ಎತ್ತಿ ಹಿಡಿಯುತ್ತ ಬೇರೆ ಧರ್ಮಗಳನ್ನು ಅನುಮಾನಿಸುತ್ತ ಹಾಗೂ ಅವಮಾನಿಸುತ್ತ ಅಸಮಾನತೆಯನ್ನು ಆಚರಿಸಲಿಲ್ಲ. ಈ ವಿಷಯದಲ್ಲಿ ಸ್ವಾಮಿ ವಿವೇಕಾನಂದರನ್ನೂ ನೆನೆಯಬೇಕು. ಗಾಂಧಿಯವರಿಗಿಂತ ಸ್ವಲ್ಪ ಹೆಚ್ಚೇ ಹಿಂದೂ ಧರ್ಮ ಕುರಿತು ಮಾತನಾಡಿದ ವಿವೇಕಾನಂದರು ಯಾವತ್ತೂ ಮೂಲಭೂತವಾದಿಯಾಗಲಿಲ್ಲ. ಹಿಂದೂ ಧರ್ಮದೊಳಗಿನ ಅಸಮಾನತೆಯ ಅಂಶಗಳನ್ನು ಗಾಂಧಿಯವರಿಗಿಂತ ಪ್ರಖರವಾಗಿ ವಿರೋಧಿಸಿದರು. ಹಿಂದೂ ಮುಸ್ಲಿಂ ಭಾವೈಕ್ಯತೆಯನ್ನು ಪ್ರಬಲವಾಗಿ ಪ್ರತಿಪಾದಿಸಿದರು. ಗಾಂಧಿ ಮತ್ತು ವಿವೇಕಾನಂದರ ಹಿಂದೂ ಧರ್ಮ ನಿಷ್ಠೆಯನ್ನು ಪ್ರಶ್ನಿಸಲು ಸಾಧ್ಯವಿಲ್ಲವೆಂಬಷ್ಟು ಅವರು ಪ್ರಾಮಾಣಿಕರಾಗಿದ್ದರು. ಈ ಪ್ರಖರ ಪ್ರಾಮಾಣಿಕತೆಯಿಂದಲೇ ಹಿಂದೂಧರ್ಮದೊಳಗಿನ ಪ್ರಶ್ನೆಪ್ರತೀಕವೂ ಆದರು.

ಇಂದು, ಹಿಂದೂ ಧರ್ಮದ ಉದ್ಧಾರಕ್ಕಾಗಿಯೇ ಹುಟ್ಟಿರುವ – ಕ್ಷಮಿಸಿ – 'ಅವತಾರವೆತ್ತಿರುವ' ರಾಜಕೀಯ ನೇತಾರರು, ಧರ್ಮದುರಂಧರರು, ನೆಪಕ್ಕೆ ಗಾಂಧಿ ಮತ್ತು ವಿವೇಕಾನಂದರ ಹೆಸರನ್ನು ನೆನೆಯುತ್ತಾರೆಯೇ ಹೊರತು ಅಂತರಂಗದ ಅವಿಭಾಜ್ಯತೆಯಿಂದ ನಡೆದುಕೊಳ್ಳುತ್ತಿಲ್ಲ. ವಿಶೇಷವಾಗಿ, ರಾಜಕೀಯ ಕ್ಷೇತ್ರದಲ್ಲಿ ಧರ್ಮ ಸಂಬಂಧಕ್ಕೆ ನಿದರ್ಶನವಾಗಬೇಕಿದ್ದ 'ಗಾಂಧಿ ಹಿಂದೂತನ' ಇವರಾರಿಗೂ ಬೇಕಾಗಿಲ್ಲ. ಶ್ರೀರಾಮ ಮತ್ತು ಹಿಂದೂಧರ್ಮವನ್ನು ಓಟಿನ ವ್ಯಾಪಾರಕ್ಕೆ ಬಳಸಿಕೊಳ್ಳುತ್ತಿರುವವರ ಅಭಿವೃದ್ಧಿ ಮುಖವಾಡವನ್ನು ಕಳಚದಿದ್ದರೆ, ನಿಜವಾದ ಹಿಂದೂಧರ್ಮವೂ ಕಾಣಿಸುವುದಿಲ್ಲ, ಶ್ರೀರಾಮ ರೂಪಕವೂ ಸಿಗುವುದಿಲ್ಲ. ಬಹುಶಃ ಇಂದಿನಷ್ಟು ದೊಡ್ಡ ಪ್ರಮಾಣದಲ್ಲಿ ಹಿಂದೆಂದೂ ಧರ್ಮ ಮತ್ತು ದೇವರ ದುರುಪಯೋಗವಾಗಿರಲಿಕ್ಕಿಲ್ಲ. ಗಾಂಧೀಜಿ ಸದಾ ಸಾಮಾಜಿಕ, ಧಾರ್ಮಿಕ ಸಾಮರಸ್ಯವನ್ನೇ ಹಂಬಲಿಸುತ್ತಿದ್ದುದರಿಂದ ಭಯೋತ್ಪಾದನೆಯನ್ನು ವಿರೋಧಿಸದೆ ಇರುತ್ತಿರಲಿಲ್ಲ. ಹೀಗಾಗಿ ಗಾಂಧಿ ಮತ್ತೆ ಮತ್ತೆ ನೆನಪಾಗುತ್ತಾರೆ, ಕಾಡುತ್ತಾರೆ.

ಇಂದು ವಿಕೃತಿಗಳು ವಿಜೃಂಭಿಸುತ್ತಿವೆ. ವಿಕೃತಿಯು ವ್ಯಕ್ತಿಗಳ ನಡೆ–ನುಡಿಗೆ ಮಾತ್ರ ಸೀಮಿತವಾಗದೆ, ಧಾರ್ಮಿಕವೂ ರಾಜಕೀಯ ಒಳಸಿದ್ಧಾಂತವೂ ಆಗಿ ಬೆಳೆಯುತ್ತಿರುವುದು ಅತ್ಯಂತ ಅಪಾಯಕಾರಿಯಾಗಿದೆ. ಈ ಮಾತಿಗೆ ನಿದರ್ಶನಾತ್ಮಕವಾದ ಎರಡು ಘಟನೆಗಳನ್ನು ಇಲ್ಲಿ ನೆನೆಯಬಹುದು.



1. 12–8–2018ರಂದು ದೆಹಲಿಯ ಜಂತರ್ ಮಂತರ್ ಬಳಿಗೆ ಬಂದ ಒಂದು ಗುಂಪು ಸಂವಿಧಾನದ ಪ್ರತಿಯನ್ನು ಸುಟ್ಟು ಹಾಕಿತು. ಡಾ. ಅಂಬೇಡ್ಕರ್ ವಿರುದ್ಧ 'ಧಿಕ್ಕಾರ' ಕೂಗಿತು. ಬಹುಶಃ ಈ ಗುಂಪು ಮೀಸಲಾತಿ ವಿರೋಧಿಯಾಗಿತ್ತು. ಆದರೆ ಅದಷ್ಟೇ ಆಗಿದ್ದರೆ ಸಂವಿಧಾನದ ಪ್ರತಿಯನ್ನು ಸುಡುವ ವಿಕೃತಿಯನ್ನು ಪ್ರದರ್ಶಿಸುತ್ತಿರಲಿಲ್ಲ. ಸಂವಿಧಾನದಲ್ಲಿ ಮೀಸಲಾತಿಯ ವಿಷಯವೊಂದೇ ಇಲ್ಲವಲ್ಲ! ಸಮಾನತೆ, ಸೋದರತೆ, ಸ್ವಾತಂತ್ರ್ಯ, ಬಹುತ್ವದ ಆಶಯಗಳು ನಿರ್ಧಾರಕ ದನಿಯಲ್ಲಿ ಕೇಂದ್ರ ಸ್ಥಾನದಲ್ಲಿವೆ. ಆದ್ದರಿಂದ ಸಂವಿಧಾನದ ಪ್ರತಿಯನ್ನು ಸುಟ್ಟವರಿಗೆ ಸ್ವಾತಂತ್ರ್ಯ, ಸಮಾನತೆ, ಸ್ವಾತಂತ್ರ್ಯದ ಆಶಯಗಳ ಬದಲು ಏಕಧರ್ಮ, ಏಕಸಂಸ್ಕೃತಿ, ಏಕ ವಿಕಾರಗಳ ಆಡಳಿತ ವ್ಯವಸ್ಥೆಯೇ ಆದರ್ಶವಾಗಿತ್ತು. ಇಪ್ಪತ್ತನೇ ಶತಮಾನದಲ್ಲಿ ಬಾರದ 'ಧೈರ್ಯ' ಇಪ್ಪತ್ತೊಂದನೇ ಶತಮಾನದಲ್ಲಿ ಬಂದು ಡಾ. ಅಂಬೇಡ್ಕರ್ ವಿರುದ್ಧದ ಧಿಕ್ಕಾರವಾಗುವ ವಿಕಾರವಾಗಿತ್ತು.

2. 30–1–2019ರಂದು ಇನ್ನೊಂದು ಘಟನೆ ನಡೆಯಿತು. ಜನವರಿ 30, ಗಾಂಧಿ ಹುತಾತ್ಮರಾದ ದಿನಾಂಕ. ಅಂದು ಗಾಂಧಿ ಸ್ಮರಣೆ ಮಾಡುವ ಬದಲು ಸಾಧ್ವಿಯೊಬ್ಬರ ನೇತೃತ್ವದ